ಕ್ರಮೇಣ ತನ್ನ ಅದೃಷ್ಟ ಬಲಗಾಯಿಸಿದ್ದನ್ನು ಹೇಳಿದರೆ ಶಾಸ್ತ್ರ, ಪುರಾಣ, ಪೂಜೆಯ ಗೋವಿಂದನಿಗೆ ತಾಯಿ ತೀರಿಕೊಂಡ ಕೆಲವೇ ದಿನಗಳಲ್ಲಿ ಮನೆ ಬಿಟ್ಟಿದ್ದು, ಹುಂಡಿ ಹೊಡೆದಿದ್ದು, ಸಾಹುಕಾರರು ಸಿಕ್ಕಿದ್ದು, ತನ್ನ ಸಿಟಿ ಜೀವನದ ಏಳು ಬೀಳುಗಳು, ರಿಯಲ್ ಎಸ್ಟೇಟಿನ ಪಡಿಪಾಟಲುಗಳು ಅರ್ಥವಾಗುವುದೋ ಇಲ್ಲವೋ ಎನಿಸಿ, 'ಎಲ್ಲಾ ಚೆನ್ನಾಗಿ ನಡೀತಾ ಇದೆ, ಕಣಯ್ಯ' ಎಂದಷ್ಟೇ ಹೇಳಿದ.

ಗೋವಿಂದಾಚಾರ್ಯನು, ನಾದಿನಿ ಮೇರಿ ತಂದಿಟ್ಟ ಫಲಾಹಾರವನ್ನು ಸಾವಧಾನದಿಂದಲೂ, ಆನಂದದಿಂದಲೂ ಸ್ವೀಕರಿಸುತ್ತ 'ಶೀನಿ, ಒಂದೊಂದು ಸರ್ತಿ ಮನೆಯಲ್ಲಿ ಅಪ್ಪನೊಂದಿಗೆ ಜಗಳ ತೆಗೆಯುವುದು, ಯಾರ ಸಾವಿನ ನಂತರವಾದರೂ, ಹೇಳದೆ ಕೇಳದೆ ಊರು ಖಾಲಿ ಮಾಡುವುದು ಕೂಡ ಅದೃಷ್ಟದ ಬಾಗಿಲೇ ಅಂತ ನಿನ್ನ ಮುಖದರ್ಶನವಾದಾಗಲೆಲ್ಲ ಗೊತ್ತಾಗುತ್ತದೆ ನೋಡು. ನಾನು ಕೂಡ ನಿನ್ನೊಂದಿಗೆ ಮನೆ ಬಿಟ್ಟಿದ್ದರೆ ಈ ಸಿಟಿಯಲ್ಲೇ ರಾಜಕಾರಣಿಗಳಿಗೆ, ಅವರ ಹೆಂಡತಿ ಮಕ್ಕಳಿಗೆ ಶಾಸ್ತ್ರ ಹೇಳಿಕೊಂಡು, ಸತ್ಯನಾರಾಯಣ ವ್ರತ, ನವಗ್ರಹಶಾಂತಿ, ಕುಜದೋಷ ಪರಿಹಾರ, ಸುದರ್ಶನಹೋಮ ಮಾಡಿಸಿಕೊಂಡು ದಿಲ್‌ದಾರಾಗಿ ಇರಬಹುದಿತ್ತಲ್ಲಯ್ಯಾ,' ಎಂದ.

'ಗೋವಿಂದಾ, ನಾನು ಮನೆ ಬಿಟ್ಟೆ ಸರಿ. ಆದರೆ, ಕಳೆದುಕೊಂಡ ಅಮ್ಮನ್ನನ್ನು ಪಡೆದುಕೊಂಡನೇ? ಈ ದರಿದ್ರ ಸಿಟಿಯ ಪಡಿಪಾಟಲಿನಿಂದ ನಿಮ್ಮೆಲ್ಲರ ಜೊತೆಗೆ ನಾಲ್ಕು ದಿನ ನಿರುಮ್ಮಳವಾಗಿ ಇರುವುದೂ ಆಗುತ್ತಿಲ್ಲವಲ್ಲ. ಬಿಡು, ನೀನು ರಾಮಸಮುದ್ರದಲ್ಲಿ ಚೆನ್ನಾಗೇ ಇದ್ದೀಯಾ. ಸಂಪಾದನೆ ಅಷ್ಟಿಷ್ಟಾದರೂ ಅನ್ನ, ಬಟ್ಟೆಗೆ ಮೋಸವಿಲ್ಲ ಅನ್ನು. ಈ ಸಿಟಿಯಲ್ಲಿ, ನಮ್ಮ ಕಾಸಿನಹುಂಡಿ ಎಷ್ಟು ತುಂಬಿದರೂ ಇನ್ನು ಭರ್ತಿಯಾಗೇ ಇಲ್ಲ ಅನ್ನುವ ಧಾವಂತದಲ್ಲಿ ದಿನನಿತ್ಯ ಎದ್ದುಬಿದ್ದಾಡುತ್ತೇವಲ್ಲ' ಎಂದು ಶ್ರೀನಿವಾಸನು ತಮ್ಮಿಬ್ಬರ ಗತಿಸ್ಥಿತಿಯು ಹೊಳೆಯ ದಂಡೆಗಳಂತೆ ಕೂಡದಿರುವುದನ್ನು ಎತ್ತಿ ಆಡಿದ.

ಶ್ರೀನಿವಾಸನನ್ನು ನೋಡುತ್ತಾ ಗೋವಿಂದನು, 'ಏನೋ, ಒಂದೂ ಅರ್ಥವಾಗದು. ಎಲ್ಲಾ ದೈವ ಚಿತ್ತ,' ಎಂದು ವಯಸ್ಸಿಗೆ ತಕ್ಕ ಮಾತಾಡಿ ನಿಟ್ಟುಸಿರು ಬಿಟ್ಟ. ನರಸಿಂಹಯ್ಯನವರೂ ಕೂಡ ಪುರಾಣ ಹೇಳಿ, ಪಂಚಾಂಗ ನೋಡಿ, ಕುಂಡಲಿ ಪರೀಕ್ಷಿಸಿ, ಎದುರು ಕೂತವರ ಸಮಸ್ಯೆಗಳು ಯಾವ ಲೆಕ್ಕಚಾರದ ಮೇಲೂ ಬಗೆಹರಿಯುವಂತೆ ಕಾಣದಿದ್ದಾಗ ಗೋವಿಂದನು ಇದೀಗ ಆಡಿದ ಮಾತುಗಳನ್ನೇ ಹೇಳಿ ಆಕಾಶಕ್ಕೆ ಕಣ್ಣು ಮಾಡಿ ಕೈಮುಗಿಯುತ್ತಿದ್ದರು.

★★★

ಬುದ್ಧಿ ಬಂದ ಲಗಾಯ್ತಿನಿಂದಲೇ ಶೀನಿಗೆ ಅಪ್ಪನನ್ನು ಕಂಡರಾಗದು. ಆದರೆ ಊರವರಿಗೆ ಮಾತ್ರ ನರಸಿಂಹಯ್ಯ ಸಕಲವನ್ನೂ ಬಲ್ಲ ಬ್ರಹ್ಮನೇ ಸೈ! ಜನಸಮೂಹದ ಸಕಲ ಸತ್ಕಾರ್ಯಗಳ ಸಮಯವನ್ನು ನಿಗದಿ ಮಾಡುವುದು ನರಸಿಂಹಯ್ಯನವರ ಪಂಚಾಂಗವಾದರೆ, ಅವರ ಗುಳಿಗೆ ಚೂರ್ಣಗಳು ಮಂದಿಗೆ ದಿವ್ಯ ಔಷಧಿ. ವಾಂತಿಭೇದಿಯೆಂದು ಕಂಕುಳಲ್ಲಿ ಮಕ್ಕಳನ್ನು ತಾಯಂದಿರು ಜೋತಾಡಿಸಿಕೊಂಡು ಬಂದಲ್ಲಿ 'ಇಷ್ಟು ತಡವಾಗಿ ಬಂದು ಹೆಚ್ಚುಕಮ್ಮಿಯಾದರೆ ಪಂಚಾಂಗದ ಮೇಲೂ, ಕಟ್ಟುವ ಯಂತ್ರದ ಮೇಲೂ, ಕೊಡುವ ತೀರ್ಥದ ಮೇಲೂ ಹಾಕಬೇಡಿ,' ಎನ್ನುತ್ತಿದ್ದರು. ಶೀನಿಗಾದರೋ ತನ್ನ ಅಪ್ಪನ ಕಾಲಜ್ಞಾನ ಅನುಮಾನದ ಕಂತೆಯಾಗಿಯೂ, ಕೊಡುತ್ತಿದ್ದ ಚೂರ್ಣ ಬೂದಿಯಾಗಿಯೂ ತೋರುತ್ತಿತ್ತು.

ಗೋವಿಂದಾಚಾರ್ಯ ನರಸಿಂಹಯ್ಯನವರ ದೈವಸಂಬಂಧಿ ಕೆಲಸಗಳಲ್ಲಿ ಕೈ ಜೋಡಿಸುತ್ತಿದ್ದರೆ, ತನ್ನ ಗಂಡನು ಓಡಿ ಹೋದ ನಂತರ ಮಾತುಬಾರದ ತಂಗಿ ರಾಜಿಯು ಪೂಜೆ ಪ್ರಸಾದದ ಕಾರ್ಯ